ಸಮಾಜ ಶಿಕ್ಷಣ ಪ್ರಸಾರಕ ಗ್ರಂಥಮಾಲೆ, ೧೦ ನೆಯ ಪುಷ್ಪ.

ಸಮಾಜ ಶಿಕ್ಷಣ ವರ್ಗಗಳಗಾಗಿ

ಸಾಮಾನ್ಯಜ್ಞಾನ

ಬ್ಯಾಂಕುಗಳ ಉಪಯೋಗ




ಲೇಖಕರು —

ನಾ. ಲಿಂ. ಗುಡ್ಡಿಮಠ, ಶಿಕ್ಷಕರು


ಸಮಾಜ ಶಿಕ್ಷಣ ಪ್ರಸಾರಕ ಗ್ರಂಥಮಾಲೆ, ೧೦ ನೆಯ ಪುಷ್ಪ.

ಸಮಾಜ ಶಿಕ್ಷಣ ವರ್ಗಗಳಿಗಾಗಿ



ಸಾಮಾನ್ಯಜ್ಞಾನ

ಬ್ಯಾಂಕುಗಳ ಉಪಯೋಗ



ಲೇಖಕರು —

ನಾ. ಲಿಂ. ಗುಡ್ಡಿನಮಠ, ಶಿಕ್ಷಕರು.

೧೯೫೩] [ಬೆಲೆ ೦-೪-೦

ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿಯವರ ಪ್ರಕಟನೆಗಳು.



೧ ಆತ್ಮೋದ್ಧಾರ
೨ ಗ್ರಾಮೋದ್ಧಾರ ಪದಗಳು
೩ ಲಾವಣಿ ಪದಗಳ ಸಂಗ್ರಹ
೪ ಪೌರನೀತಿಯ 'ಅ ಆ'
೫ ಹಿರಿಮೆಯ ಮಂತ್ರ ಅರ್ಥಾತ್ ಸ್ವಚ್ಛತೆ
೬ ಶಿಶು ಸಂಗೋಪನ ಹಾಗೂ ಪ್ರಥಮ ಚಿಕಿತ್ಸೆ
೭ ಅಂದಚಂದ
೮ ಬಸವಣ್ಣನವರು
೯ ಅಕ್ಕಮಹಾದೇವಿ
೧೦ ಬ್ಯಾಂಕುಗಳ ಉಪಯೋಗ

ಮುನ್ನುಡಿ.




ಕರ್ನಾಟಕ ಪ್ರಾದೇಶಿಕ ಶಿಕ್ಷಣ ಸಮಿತಿಯವರು ಈ ಹೊತ್ತಿಗೆಯನ್ನು ಹೊರಡಿಸುವ ಕೋಣೆ ಹೊತ್ತುದು ಆದರಣೀಯವಾದುದು

ಈಗಿನ ಸಮಾಜ ರಚನೆಯಲ್ಲಿ ಸಾವುಕಾರಿಕೆಯ ನಿರ್ಮೂಲನವಾಗುವ ಸಮಯದಲ್ಲಿ ಆಸ್ಥಾನವನ್ನು ಹಿಡಿಮ ಸಹಾಯ ಮಾಡುವ ಬ್ಯಾಂಕುಗಳ ಉಪಯುಕ್ತತೆಯು ಹೆಚ್ಚೆಚ್ಚು ಆಗುತ್ತಿರುವದು ಅವಶ್ಯವು ಈ ಸಮಯವನ್ನು ಸಾಧಿಸಿ ಈ ಹೊತ್ತಿಗೆಯನ್ನು ಬರೆದು ಸಮಾಜದ ಕೊರತೆಯನ್ನು ಕಳೆದರೆಂದು ಹೇಳಲಡ್ಡಿಯಿಲ್ಲ ಈ ಹೊತ್ತಿಗೆಯಲ್ಲಿ ಬ್ಯಾಂಕುಗಳ ಉಪಯುಕ್ತತೆಯ ಆಮೂಲಾಗ್ರ ವಿಚಾರವು ಸಂಗ್ರಹಿತವಾಗಿದೆ ಇಂಥ ಪುಸ್ತಕವನ್ನು ಸಮಾಜವು ನಿರೀಕ್ಷಿಸುತ್ತಿದೆಯೆಂದು ಹೇಳುತ್ತೇವೆ ಇಂಥ ಹೊತ್ತಿಗೆಯ ಉಪಯುಕ್ತತೆಯನ್ನು ಕಂಡು ಸಮಾಜ ಶಿಕ್ಷಣದ ಹೊರೆ ಹೊತ್ತ ಸಂಸ್ಥೆಯು ಸಮಾಜ ಶಿಕ್ಷಣ ದಿನಾಚರಣೆಯ ಶುಭಮುಹೂರ್ತದಲ್ಲಿ ಈ ಚಿಕ್ಕ ಹೊತ್ತಿಗೆಯನ್ನು ಪ್ರಸಿದ್ಧಿಸಲು ತುಂಬಾ ಸಂತೋಷ ಸಮಾಜವು ಈ ಹೊತ್ತಿಗೆಯ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಆಶಿಸುವ ಉದ್ದೇಶವನ್ನಿಟ್ಟು ಬರೆದ ಲೇಖಕರಿಗೆ ಅಭಿನಂದನೆಗಳು

ಬೆಳಗಾಂವ
" " "
೧-೧೧-೫೩

ಆರ್. ಕೆ. ಮೆಣಸಿ,
ಸೆಕ್ರೆಟರಿ ಕರ್ನಾಟಕ ಪ್ರಾದೇಶಿಕ
ಸಮಾಜ ಶಿಕ್ಷಣ ಸಮಿತಿ, ಬೆಳಗಾಂವ

ವಿಷಯ ಸೂಚನೆ



೧ ಬ್ಯಾಂಕಿನ ವಿಚಾರ.

ಬ್ಯಾಂಕು ಅಂದರೆ ಹಣದ ಅಂಗಡಿ. ಇದರಲ್ಲಿ ಹಣವುಳ್ಳವರು ಹಣ ಇಡುವರು, ಹಾಗು ತೆಗೆದುಕೊಳ್ಳುವರು. ಹಣವಿಲ್ಲದವರು ಅಡವು ಇಟ್ಟು ಸಾಲತರುವರು, ಮತ್ತು ಕರಾರಿನ ಪ್ರಕಾರ ತೀರಿಸುವರು. ಹಣವಿಟ್ಟವರಿಗೆ ಠೇವುದಾರರೆಂದು ಸಾಲತಂದವರಿಗೆ ಸಾಲಗಾರರೆಂದು ಅನ್ನುವರು. ಠೇವು ದಾರರಿಗೆ ಬ್ಯಾಂಕಿನಿಂದ ಪ್ರತಿ ವರುಷ ಬಡ್ಡಿ ಬರುವದು. ಸಾಲಗಾರರು ಬಡ್ಡಿಯನ್ನು ಕೊಡಬೇಕಾಗುವದು. ಬಡ್ಡಿಯು ಬಹು ಸುಲಭ. ಲೆಕ್ಕ ಸರಿ. ಇದರಿಂದ ಬಡವರಿಗೆ ದಡ್ಡರಿಗೆ ಬ್ಯಾಂಕು ಬಹಳ ಉಪಯೋಗವಾಗುವದು. ಇದರಲ್ಲಿ ಹಣ ಮುಳುಗುವ ಹೆದರಿಕೆ ಇಲ್ಲ. ಯಾಕಂದರೆ ಇದಕ್ಕೆ ಬಹು ಜನರ ಬೆಂಬಲವಿರುತ್ತದೆ. ಸರಕಾರದ ಸಹಾಯವಿರುತ್ತದೆ.

ಬ್ಯಾಂಕಿನಲ್ಲಿ ಮಂಜೂರ ಮಾಡಿದ ನೇಮಗಳ ಪ್ರಕಾರ ವ್ಯವಹಾರವು ನಡೆಯುತ್ತದೆ. ಆದುದರಿಂದ ಇಲ್ಲಿ ಬಡವ ಬಲ್ಲಿದ ಜಾಣ, ದಡ್ಡರೆಂಬ ಭೇದ ಗಳಿಲ್ಲದೆ ಹಣಕೊಡುವುದು ತಗೆದುಕೊಳ್ಳುವುದು ನಡೆಯುವದು. ಯಾರಿಗೂ ಅನ್ಯಾಯ ಮಾಡಲಿಕ್ಕೆ ಬರುವದಿಲ್ಲ. ಬ್ಯಾಂಕಿಗೆ ಬಂದವರೆಲ್ಲ ಸಮಾನರು. ಎಲ್ಲರಿಗೂ ತಕ್ಕ ಮನ್ನಣೆದೊರೆಯುವದು. ಆದುದರಿಂದ ಇದರೊಡನೆ ವ್ಯವಹಾರ ಮಾಡಲಿಕ್ಕೆ ಯಾರೂ ಹೆದರಬಾರದು. ಹಿಂಜರಿಯಬಾರದು. ಪರದೇಶಗಳಲ್ಲಿ ಎಲ್ಲ ಜನರು ಬ್ಯಾಂಕಿನ ಮುಖಾಂತರ ತಮ್ಮ ವ್ಯವಹಾರ ಮಾಡುವರು. ಅದರಿಂದ ಅವರಿಗೆ ಒಳ್ಳೇ ಅನುಕೂಲವಾಗಿದೆ. ಹೆಚ್ಚು ಹೆಚ್ಚು ಹಣಗಳಿಸುವ ಹವ್ಯಾಸದಲ್ಲಿ ಅವರಿಗೆ ಹೊತ್ತೇ ಗೊತ್ತಾಗುವದಿಲ್ಲ. ಬಂದ ಹಣವನ್ನು ಬ್ಯಾಂಕಿನಲ್ಲಿ ಒಗೆದು ತಮ್ಮ ತಮ್ಮ ಮನೆಗಳಲ್ಲಿ ಅಂಜಿಕೆ ಇಲ್ಲದೆ ನಿದ್ರೆ ಮಾಡುತ್ತಾರೆ. ನಮ್ಮ ದೇಶದಲ್ಲಿಯೂ ಪಟ್ಟಣಿಗರು ಮಾತ್ರ ಬ್ಯಾಂಕಿನ ಉಪಯೋಗವನ್ನು ಚನ್ನಾಗಿ ಮಾಡಿಕೊಳ್ಳುತ್ತಾರೆ. ಬ್ಯಾಂಕಿನ ಬಲದಿಂದ ದೊಡ್ಡ ದೊಡ್ಡ ವ್ಯಾಪಾರ ಸಾಗಿಸುತ್ತಾರೆ. ಕಾರಖಾನೆ ನಡೆಸುತ್ತಾರೆ. ಹಣ ಇಡುತ್ತಾರೆ, ತೆಗೆದುಕೊಳ್ಳುತ್ತಾರೆ. ಸಾಲ ತರುತ್ತಾರೆ. ತೀರಿಸುತ್ತಾರೆ. ತಮ್ಮ ಸಂಪತ್ತಿಯನ್ನು ಹಲವು ಮುಖಗಳಿಂದ ಹೆಚ್ಚಿಸಿಕೊಂಡು ಸುಖಪಡೆಯುತ್ತಾರೆ

ದ್ವಾರ ಆದರ ಹಳ್ಳಿಗಳಲ್ಲಿ ಬ್ಯಾಂಕು [illegible] ಜನರೇ ಹೆಚ್ಚು ಇದಕ್ಕೆ ಅನುಭವಸ್ಥರನ್ನು [illegible] ಹಳ್ಳಿ, ಹಣ್ಣಿನ ಅಂಗಡಿಗಳಿಗೆ ಹೋಗುವಂತೆ ಹಾಗೆಯೇ [illegible] ಹಾಗು ಬ್ಯಾಂಕಿ (ಹಣದಂಗಡಿ)ಗೆ ಹೋಗುವಷ್ಟು [illegible]

ಹಣವು ಹತ್ತಿರ ಇದ್ದರೆ ನಾನಾ ಅಹಂಕಾರ [illegible] ಭಯಗಳು ಏಕ ಕಾಲಕ್ಕೆ ಮೂಡುತ್ತವೆ ಹಾಗೂ ಹಲವು ಹೊಸ ಕೆಲಸಗಳನ್ನು [illegible] ಇದಲ್ಲದೆ ಹಣವು ನಮ್ಮ ಹತ್ತಿರ [illegible] ಗಂಟುಬೀಳುತ್ತಾರೆ ಈ ಎಲ್ಲಾ [illegible] ಬಿಡುತ್ತದೆ ಹ್ಯಾಗಂದರೆ ನಮ್ಮ ಕೈಯಲ್ಲಿದ್ದ ಹಣವನ್ನು [illegible] ದಿಂದ ನಮ್ಮ ಹಣವು ಹತ್ತಿರ [illegible] ಬ್ಯಾಂಕಿನಿಂದ ನನಗೆ ಬೇಕಾದಾಗ ಹಣ ತೆಗೆದುಕೊಳ್ಳಲು [illegible] ನಮ್ಮ ಪೀಡಿತರನ್ನು ದೂರ ಹೋಗಿ ಬೇಕಾದ ವ್ಯಾಪಾರವನ್ನು ಮಾಡಲಿಕ್ಕೆ ಬರುತ್ತದೆ ಆದುದರಿಂದ ಉತ್ತಮವಾಗಿ ಬಾಳುವ ಮಾಡುವವರಿಗೆ ಬ್ಯಾಂಕು ಬಹಳ ಉಪಯೋಗವಾಗುವದು

ಹಣವು ಹತ್ತಿರ ಇದ್ದರ ಹಗಲಿಲ್ಲ ಹೆದರಿಕೆ ತಪ್ಪುವದಿಲ್ಲ ಸರ್ವರನ್ನು ಸಂಶಯದಿಂದ ನೋಡಬೇಕಾಗುತ್ತ [illegible] ಕನಸು [illegible] ಸಾಕು ಎದೆಯೊಡೆದು ನೀರ [illegible] ಕಳ್ಳರೇ ಬಂದಂತಾಗುತ್ತದೆ ಒಂದು ವೇಳೆ [illegible] ಬಂದರೆ ಆಯಿತು ಹಣವನ್ನು ಕಳಕೊಳ್ಳ [illegible] ಕೊಳ್ಳ ಬೇಕು ದೈವವಶಾತ್ ಅವರಲ್ಲಿ [illegible] ಹಣ ಹೋದ ಹೊಟ್ಟೆಬೇನೆಯಿಂದ ನಾವು ಸಮೀಪಿಸ ಹತ್ತುವದು ಆದುದರಿಂದ ಹಣವನ್ನು ದೂರವಿರಿಸಿ ದುಃಖ ತಪ್ಪಿಸಿಕೊಳ್ಳಬೇಕು ಸಮಯ ಬಂದಾಗ ಸಹಾಯಕ್ಕೆ ತೆಗೆದುಕೊಂಡು ಸುಖವನ್ನು ಹೊಂದಬೇಕು ಅದಕ್ಕಾಗಿ ಬ್ಯಾಂಕಿನ ಕೂಡ ವ್ಯವಹಾರ ಮಾಡುವದರಿಂದ ನಮ್ಮ ಉದ್ದೇಶವು ಈಡೇರುತ್ತದೆ

ಕೆಲವು ಜನ ಹಣವಂತರು [illegible] ಮೋಸಗಾರರಿಗೆ ಸಾಲಕೊಟ್ಟು ಅಸಲನ್ನೇ ಕಳೆದುಕೊಂಡ ಉದಾಹರಣೆಗಳು ಹಲವು

ಸಿಗುತ್ತಿರಲಿಲ್ಲ. ಕೆಲವರು ಒತ್ತೆಯ ಸಾಮಾನುಗಳಲ್ಲಿ ನಂಬಿಗೆಯಿಟ್ಟು ಕೊಂಡು ಸಾಲ [illegible] ಒತ್ತೆಯಿಟ್ಟಿರುವ ಸಾಮಾನುಗಳಾಗಿ ಬಂಗಾರದಂಥ [illegible] ಪರಮುಸಡಿ ಸೂಲಬತ್ತಿಯಾಗುವರು. ತನ್ನ ಸಾಲ [illegible] ಹೋದರೆ ಹೆಚ್ಚು ಬೆಲೆ ಕೊಟ್ಟು ಆ ಸಾಮಾನು ಬಿಡಿಸಿಕೊಳ್ಳಬೇಕು. ಮತ್ತು ಸಾಲಗಾರನ ಕೈಕಾಲು ಹಿಡಿದುಕೊಳ್ಳಬೇಕು. ಆಗ [illegible] ಬಲ್ಲ. ಈಗಂತೂ [illegible] ಸಾಧ್ಯವಾಗುತ್ತದೆ. ಅದು [illegible] ಕಾಗುತ್ತದೆ. ಆಗ [illegible] ತಿಳಿಸಬೇಕಾಗಿಲ್ಲ. [illegible] ಸಾಲ ಕೊಟ್ಟು [illegible] ತಪ್ಪುವದಿಲ್ಲ. [illegible] ದರಿಂದ ಹಣವುಳ್ಳವರು [illegible] ಹೇಳಿ ಬರುವ, ಬಡ್ಡಿ ಸಿಗುವ ಬ್ಯಾಂಕಿನಲ್ಲಿ [illegible] ಭಾರತದೇಶವನ್ನು ಉದ್ಧರಿಸಬೇಕು.

೨ ಬ್ಯಾಂಕಿನ ಉದಯ.

ನಮ್ಮ ದೇಶದಲ್ಲಿ ಮೊದಲು ಬ್ಯಾಂಕುಗಳು ಇದ್ದಿಲ್ಲ. ಪರದೇಶದವರು ಬ್ಯಾಂಕುಗಳನ್ನು ಮಾಡಿಕೊಂಡು ಬಹಳ ಸುಖಪಡುತ್ತಿದ್ದರು. ಅದನ್ನು ನೋಡಿ ಆಗಿನ ಸರಕಾರದವರು ನಮ್ಮಲ್ಲಿ ಬ್ಯಾಂಕುಗಳನ್ನು ಸೊಸಾಯಿಟಿಗಳನ್ನು ಉಂಟು ಮಾಡಿದರು ಮತ್ತು ಇವುಗಳ ವಿಚಾರಣೆಗಾಗಿ ಸಹಕಾರೀ ಖಾತೆಯನ್ನು ಸ್ಥಾಪಿಸಿದರು. ಆಗ ಅನೇಕ ಬ್ಯಾಂಕುಗಳು ಬಳಕೆಗೆ ಬಂದವು. ಅಂದಿನಿಂದ ಅಂದರೆ ಅಜಮಾಸು ಐವತ್ತು ವರ್ಷಗಳಿಂದ ಬ್ಯಾಂಕುಗಳು ಬೆಳೆಯುತ್ತ ಬಂದಿರುತ್ತವೆ. ಇದರಲ್ಲಿಯೂ ಹಣ ಜನರದು. ಅದರ ವ್ಯವಹಾರ ಮಾಡುವವರು ಜನರಿಂದ ಆರಿಸಿದವರು. ತಪ್ಪು ತಡೆಗಳಾಗದಂತೆ ನೋಡಿಕೊಳ್ಳುವವರು ಸರಕಾರದವರು. ಹೀಗೆ ಬಹು ಜನರ ಬೆಂಬಲದಿಂದ ಬ್ಯಾಂಕುಗಳು ಒಳ್ಳೇ ಸರಳವಾಗಿ ಬಂದಿರುತ್ತವೆ.

ಆರಂಭದಲ್ಲಿ ಕೆಲವು ಜನರು ಕೂಡಿ ಬ್ಯಾಂಕು ಮಾಡುವ ಬಗ್ಗೆ ವಿಚಾರ ಮಾಡುವರು. ಪ್ರತಿಯೊಬ್ಬರು ಇಂತಿಷ್ಟು ಹಣ ಕೂಡಬೇಕೆಂದು ಗೊತ್ತು

ಪಡಿಸುವರು ಆಗ ಹತ್ತಿಪ್ಪತ್ತು ಸಾವಿರ ರೂಪಾಯಿ ಕೂಡಿಸಿ ಸಹಕಾರಿ ಖಾತೆಯ ಅಧಿಕಾರಿಗಳಿಗೆ ತಿಳಿಸುವರು ಅವರು ಬಂದು ಕೆಲವು ನಿಯಮಗಳೊಂದಿಗೆ ಅದನ್ನು ನೋಂದಾಯಿಸುವರು. ಆಗ ಬ್ಯಾಂಕು ಹುಟ್ಟಿದಂತಾಯಿತು ಅದರ ಕೆಲಸವನ್ನು ಮಾಡಲಿಕ್ಕೆ ಕೆಲವು ಜನ ನೌಕರರನ್ನು ಸಭೆಯಲ್ಲಿ ನೇಮಿಸುವರು, ಅವರ ಮುಖಾಂತರ ಬ್ಯಾಂಕಿನ ವ್ಯವಹಾರ ನಡೆಯುವದು, ಹಣವಂತರಿಂದ ಕಡಿಮೆ ಬಡ್ಡಿಯ ದರದಂತೆ ಹಣ (ಠೇವು) ಇಟ್ಟುಕೊಳ್ಳುವರು ಹಣವಿಲ್ಲದವರಿಗೆ ಆಧಾರ ಒಪ್ಪಿಕೊಂಡು ತುಸು ಹೆಚ್ಚು ಬಡ್ಡಿಯ ದರದಂತೆ ಸಾಲ ಕೊಡುವರು. ಇದರಿಂದ ಬ್ಯಾಂಕಿನ ಹಣ ಮುಳುಗುವ ಭಯವಿರುವದಿಲ್ಲ ವರ್ಷದ ಕೊನೆಗೆ ಠೇವುದಾರರಿಗೆ ಬ್ಯಾಂಕಿನವರು ಬಡ್ಡಿ ಕೊಡುವರು ಸಾಲಿಗಾರರಿಂದ ಕಂತಿನ ಪ್ರಕಾರ ಅಸಲು ಬಡ್ಡಿ ವಸೂಲ ಮಾಡುವರು. ಹೀಗೆ ಮಾಡುವದರಿಂದ ಕೆಲವು ಹಣ ಹೆಚ್ಚು ಬರುತ್ತದೆ ಇದರಲ್ಲಿ ಬ್ಯಾಂಕಿನ ಖರ್ಚು ಕಳೆದು ಉಳಿದ ಲಾಭವನ್ನು ಬೆಳೆಯಿಸುತ್ತ ಹೋಗುವರು, ಇದಕ್ಕೆ ಕಾದಿಟ್ಟ ಹಣ ಎನ್ನುವರು. ಇದನ್ನು ಖರ್ಚು ಮಾಡಲಿಕ್ಕೆ ಸರಕಾರದ ಅಪ್ಪಣೆಬೇಕು. ಅದನ್ನು ಪಡೆದು ಜನಹಿತದ ಕೆಲಸ ಮಾಡಲಿಕ್ಕೆ ಬರುತ್ತದೆ

ಪ್ರತಿವರ್ಷ ಸರಕಾರಿ ಅಧಿಕಾರಿಗಳು ಬಂದು ಬ್ಯಾಂಕಿನ ಲೆಕ್ಕಪತ್ರ ತಪಾಸ ಮಾಡುವರು ತಕ್ಕ ಸೂಚನೆ ಮಾಡುವರು. ತಪ್ಪು ತಿದ್ದಿಕೊಳ್ಳಲಿಕ್ಕೆ ತಿಳಿಸುವರು ಆ ಮೇಲೆ ಬ್ಯಾಂಕಿನ ಮೆಂಬರರು ದೊಡ್ಡ ಸಭೆ ಕರೆದು ಅದರಲ್ಲಿ ಬ್ಯಾಂಕಿನ ಲಾಭ ಹಾನಿ ಸರಕಾರದ ಸೂಚನೆಗಳನ್ನು ನೋಡಿ ಮುಂದಿನ ವರ್ಷ ಕೆಲಸ ಮಾಡತಕ್ಕ ಯೋಗ್ಯ ನೌಕರರನ್ನು ನೇಮಿಸುವರು. ಅವರ ಪಗಾರ ಗೊತ್ತುಮಾಡುವರು ಅಯೋಗ್ಯ ಜನರನ್ನು ತೆಗೆದು ಹಾಕುವರು. ಈ ಭಯದಿಂದ ಬ್ಯಾಂಕಿನಲ್ಲಿರುವ ನೌಕರರು ಒಳ್ಳೇ ಎಚ್ಚರಿಕೆಯಿಂದ ಕೆಲಸ ಮಾಡುವರು ಬಂದವರೊಡನೆ ಭಯದಿಂದ ನಡೆದುಕೊಳ್ಳುವರು ಲೆಕ್ಕ ಪತ್ರ ಸರಿಯಾಗಿ ಇಡುವರು ಹಣದ ದುರುಪಯೋಗವಾದದ್ದು ಕಂಡ ಕೂಡಲೇ ಸರಕಾರವು ಶಿಕ್ಷೆ ಮಾಡುತ್ತದೆ ಬ್ಯಾಂಕಿಗೆ ಬಲವಾದ ತಿಜೋರಿಯನ್ನು ತರಿಸಿ ಕಾವಲುಗಾರರನ್ನು ನೇಮಿಸಿರುವರು ಆದರಿಂದ ಅಲ್ಲಿ ಕಳವಾಗುವದಿಲ್ಲ

೩ ಬ್ಯಾಂಕಿನ ಏಳಿಗೆ

ಬ್ಯಾಂಕಿನ ಬಡ್ಡಿಯ ದರವು ಸಣ್ಣದಿದ್ದರೂ ದೊಡ್ಡ ಪ್ರಮಾಣದಲ್ಲಿ ನಡೆಯುವದರಿಂದ "ಹನಿಗೆ ಹನಿಕೂಡಿ ಹಳ್ಳನಾಗುವಂತೆ" ವರ್ಷದ ಕೊನೆಗೆ ದೊಡ್ಡ ನಿಧಿಯಾಗುವದು. ಪ್ರತಿವರ್ಷ ಇದಕ್ಕೆ ಬಡ್ಡಿ ಬರುವದರಿಂದ ಕೆಲವು ದಿವಸಗಳಲ್ಲಿ ಈ ಕಾಯ್ದಿಟ್ಟ ನಿಧಿಯು ಹೆಚ್ಚುತ್ತ ಹೋಗುವದು. ಇದು ಹೆಚ್ಚಾದಂತೆ ಬ್ಯಾಂಕಿನ ಬಲವು ಬೆಳೆಯುತ್ತ ಹೋಗುತ್ತದೆ. ಆಗ ಮೊದಲಿಗಿಂತ ಕಡಿಮೆ ಬಡ್ಡಿಯ ದರದಿಂದ ಸಾಲ ಕೊಡಲಿಕ್ಕೆ ಬರುತ್ತದೆ ಮತ್ತು ಜನೋಪಯೋಗಿ ಕೆಲಸಕ್ಕೆ ಬಡ್ಡಿ ಇಲ್ಲದೆ ಸಹ ಸಾಲ ಕೊಡಲಿಕ್ಕೆ ಬರುತ್ತದೆ. ಇದರಿಂದ ಬಹು ಜನರ ಚಿತ್ತವು ಬ್ಯಾಂಕಿನ ಕಡೆಗೆ ಬರುತ್ತದೆ. ತಮ್ಮ ತಮ್ಮ ಆದಾಯವನ್ನು ಭಯವಿಲ್ಲದೆ ಬ್ಯಾಂಕಿನಲ್ಲಿ ಇಡುತ್ತ ಹೋಗುವರು. ಪ್ರೀತಿಯಿಂದ ಕಡಿಮೆ ಬಡ್ಡಿ ತೆಗೆದುಕೊಳ್ಳುವರು. ಪ್ರತಿವರ್ಷ ಲಾಭವು ಹೆಚ್ಚುತ್ತ ಹೋಗುವದು. ಆರಂಭದಲ್ಲಿ ಹತ್ತುಹತ್ತು ಸಾವಿರ ರೂಪಾಯಿ ಹಾಕಿದ ಬ್ಯಾಂಕಿನ ಭಂಡವಲು ೧೫-೨೦ ವರ್ಷಗಳಲ್ಲಿ ಕೋಟಿಗಟ್ಟಲೆ ಆದ ಉದಾಹರಣೆಗಳು ಬಹಳವುಂಟು.

ನಮ್ಮ ದೇಶದಲ್ಲಿ ರಿಝರ್ವ್ ಬ್ಯಾಂಕು, ಇಂಪೀರಿಯಲ್ ಬ್ಯಾಂಕು, ಸೆಂಟ್ರಲ್ ಬ್ಯಾಂಕು ಮೊದಲಾದವುಗಳು ಬಹಳ ಏಳಿಗೆಯನ್ನು ಹೊಂದಿವೆ. ಇವು ಪ್ರತಿವರ್ಷ ಲಕ್ಷಗಟ್ಟಲೆ ಲಾಭವನ್ನು ಸಂಪಾದಿಸುತ್ತವೆ. ಶೇರುದಾರ, ಠೇವುದಾರರ ಪ್ರೀತಿಯನ್ನು ಗಳಿಸಿಕೊಂಡಿವೆ. ಅಲ್ಲಲ್ಲಿ ತಮ್ಮ ತಮ್ಮ ಶಾಖೆಗಳನ್ನು ಹರಡಿಸಿ ಬಿಟ್ಟಿವೆ. ಹೀಗಾಗಿ ದೇಶದ ತುಂಬ ಈ ಬ್ಯಾಂಕುಗಳ ಹೆಸರು ಬಿತ್ತಿಬಿಟ್ಟಿದೆ. ಅದಕ್ಕಾಗಿ ಎಲ್ಲ ಜನರು ತಮ್ಮ ತಮ್ಮ ಉಳಿತಾಯವನ್ನು ಭಯವಿಲ್ಲದೆ ಇಡುವರು; ಬಡ್ಡಿ ತೆಗೆದುಕೊಳ್ಳುವರು. ಈ ಪ್ರಕಾರ ಜನರ ನಂಬಿಗೆಯನ್ನು ಗಳಿಸಿಕೊಂಡ ಬ್ಯಾಂಕುಗಳು ಬೇಗ ಬೆಳೆಯುತ್ತವೆ. ಬೆಳೆದ ಬ್ಯಾಂಕುಗಳು ಸರಕಾರಕ್ಕೆ ಸಹ ಬೇಕಾದಷ್ಟು ಸಾಲ ಕೊಡುತ್ತವೆ. ಆಗ ಸರಕಾರಕ್ಕೆ ಸಂಪತ್ತು ಹೆಚ್ಚಿಸುವ ಕೆಲಸಗಳನ್ನು ಕೈಕೊಳ್ಳಲಿಕ್ಕೆ ಒಳ್ಳೇ ಸಹಾಯವಾಗುತ್ತದೆ. ಆದುದರಿಂದ ಪ್ರತಿಯೊಬ್ಬರು ತಮ್ಮ ಉಳಿಕೆಯ ಹಣವನ್ನು ನಂಬಿಗೆಯುಳ್ಳ ಬ್ಯಾಂಕಿನಲ್ಲಿ ಶೇರು ಕೊಳ್ಳಬೇಕು. ಇಲ್ಲವೆ ಠೇವು ಇಡಬೇಕು. ಅಂದರೆ ಬ್ಯಾಂಕು ಬೆಳೆಯುವದು.

[illegible] ತನಿಖೆಗಾರರು ಸತ್ಯಸಂತರಾಗಿ ದಕ್ಷತೆ ಕಾಳಜಿಯಿಂದ ಕೆಲಸ ಮಾಡಿದರೆ, ಠೇವುದಾರರ ಸಂಗಡ ವಿನಯದಿಂದ ನಡೆದುಕೊಂಡರೆ, ಅದರ ಹೆಸರು ಬೇಗ ಬೆಳಕಿಗೆ ಬರುತ್ತದೆ. ಮುಂದೆ ಅದರ ಏಳಿಗೆಯು ತಪ್ಪದೇ ಆಗುತ್ತದೆ. ಲಂಚ, ವಂಚನೆ ಮುಂತಾದ ದೋಷಗಳಿಗೆ ಎಡೆ ಕೊಟ್ಟರೆ, ಅಥವಾ ಆಲಸ್ಯತನವನ್ನು ತೋರಿ ಕಾರ್ಯದಲ್ಲಿ [illegible] ಮಾಡಿದರೆ, ಇಲ್ಲವೆ ಮುಂಜಾಗ್ರತೆಯಿಲ್ಲದ ದುಡುಕಿ ವ್ಯವಹಾರ ಮಾಡಿದರೆ, ಹಾನಿಯಾಗಿ ಹೆಸರು ಕೆಟ್ಟು ಬ್ಯಾಂಕಾಗಲಿ ಸಂಸ್ಥೆಯಾಗಲಿ ಮುಳುಗಿ ಹೋಗುವ ಸಂಭವವುಂಟು. ಇದರಿಂದ ಆಡಳಿತಗಾರರ ಹಾನಿ, ಜನತೆಗೆ ಹಾನಿ ಸಮಾಜಕ್ಕೆ ಹಾನಿ, ದೇಶದ ಹಾನಿ ಮಾಡಿದಂತೆ ಆಗುತ್ತದೆ. ಜನರ [illegible] ಕೆಡಿಸಿ ಹಾಳು ಮಾಡಿದ [illegible] ಜನ್ಮದಲ್ಲಿ [illegible] ದುಃಖವು ತಪ್ಪುವದಿಲ್ಲ. [illegible] ಸಿದ್ಧವಿರುತ್ತದೆ. ಆದ್ದರಿಂದ ಆಡಳಿತಗಾರರು [illegible] ಬಾರದು.

ಬ್ಯಾಂಕಿನ ಇಮಾರತು ಎಲ್ಲ ಜನರಿಗೆ ಬೇಗನೆ ಬರಲಿಕ್ಕೆ ಅನುಕೂಲವಾಗಿರುವ ಸ್ಥಳದಲ್ಲಿ ಇರಬೇಕು. ಅದನ್ನು ಚನ್ನಾಗಿರಬೇಕು. ಗಾಳಿ ಬೆಳಕುಗಳ ಕೊರತೆಯಿರಬಾರದು. ಬಂದ ಜನರಿಗೆ ಕೂಡ್ರಲಿಕ್ಕೆ ಅನುಕೂಲವಾಗಿರಬೇಕು. ಮನೋಹರವಾಗಿರಬೇಕು. ಯಾವಾಗಲೂ [illegible] ಲಕ್ಷ್ಮಿಯ ವಸತಿಯು ಯಾವುದಕ್ಕೂ ಕೊರತೆಯಿರಬಾರದು. ಸುತ್ತಮುತ್ತ ಜನವಸತಿಯಿರಬೇಕು. ಬಲವಾದ ಬಾಗಿಲು, ಕಿಡಿಕಿಗಳಿರಬೇಕು. ಭಾರವಾದ ತಿಜೋರಿ, ಕಪಾಟುಗಳಿರಬೇಕು. ಸಶಸ್ತ್ರ ಶಿಪಾಯಿಯರ ಕಾವಲಿರಬೇಕು. ಸಂಬಂಧವಿಲ್ಲದ ಜನರನ್ನು ಸಂಶಯಯುಕ್ತ ಜನರನ್ನು ವಿಚಾರಿಸಿ ಒಳಗೆ ಬಿಡಬೇಕು. ಪೋಲಿಸ ಠಾಣೆಗೆ ಟೆಲಿಫೋನಿನ ಸಂಬಂಧವಿಟ್ಟುಕೊಂಡಿರಬೇಕು. ಹೀಗೆ ಹಲವು ರೀತಿಯಿಂದ ಬರಹೋಗುವ ಜನರಿಗೆ ಬೇಸರವಾಗದಂತೆ ಬಂದ ಹಣದ ರಕ್ಷಣೆಯಾಗುವಂತೆ ಬ್ಯಾಂಕಿನ ಇಮಾರತು ಇರಬೇಕು.

ಮುಖ್ಯವಾಗಿ ಬ್ಯಾಂಕಿನ ಏಳಿಗೆಯು ಬಹಳ ದೊಡ್ಡ ಪ್ರಮಾಣದಲ್ಲಿ ವ್ಯವಹಾರ ನಡೆಯುವದರಿಂದ ಆಗುತ್ತದೆ. ಈ ಮಾತು ಹಳ್ಳಿಗಳಲ್ಲಿ ಸಾಗುವದಿಲ್ಲ. ಹಳ್ಳಿಯಲ್ಲಿ ತುಸು ಜನರು ಸ್ವಲ್ಪ ವ್ಯವಹಾರ ಅದರ ಖರ್ಚ ಸಾಗುವದಿಲ್ಲ. ಆದುದರಿಂದ ೮-೧೦ ಹಳ್ಳಿಗಳ ಜನರು ಸೇರಿಕೊಂಡು ಹೊಸ

ಬ್ಯಾಂಕು ತೆರೆಯಬೇಕು ಇಲ್ಲವೆ ಈಗಿದ್ದ ಬ್ಯಾಂಕುಗಳ ಕೂಡ ವ್ಯವಹಾರ ಸಾಗಿಸಬೇಕು ಯಾವ ಬ್ಯಾಂಕಾದರೂ ನೋಂದು ಆದ ಮೇಲೆ ಅವು ನಮ್ಮ ವಾಗಲಾರವು ನಮ್ಮ ಅಧೀನದಲ್ಲಿ ಉಳಿಯಲಾರವು ಅದರ ಮೇಲೆ ಸರಕಾರದ ಅಧಿಕಾರ ಸಂಪೂರ್ಣ ಇರುತ್ತದೆ

೪ ಬ್ಯಾಂಕಿನ ಬಳಿಕೆ.

ಈ ಸಂಸಾರದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಹಣವು ಅವಶ್ಯವಾಗಿ ಬೇಕು. "ಹಣವಿಲ್ಲದವನು ಹೆಣಕ್ಕಿಂತ ಕಡೆ" ಎಂಬ ಹೇಳಿಕೆ ನಮ್ಮ ಹಿರಿಯರ ಮಾತು ಎಷ್ಟು ಸುಳ್ಳಲ್ಲ ಹಣವಿದ್ದವನು ಸರಿಯಾದ ಕೆಲಸ ಮಾಡುತ್ತಾನೆ. ಹಣವೇ ಜೀವನಾಗಿರುವದರಿಂದ, ಹಣವಿಲ್ಲದವನು ಹೆಣದಂತೆ ಆಗುವದರಲ್ಲಿ ಸಂದೇಹವಿಲ್ಲ ಮತ್ತು —

ಕಂ॥ ಹಣವುಳ್ಳವರಂಗವು ತಾಂ।
ನೆಣಮಾಂಸಗಳಿಂದೆ ತುಂಬಿ ಚೆಲುವಾಗಿ ಕರ್ಣಂ॥
ಹಣವಿಲ್ಲದ ಹೆಣದ ಮುಖಂ।
ನೊಣನೊರಜಿನ ಸಂತೆಯಾಗಿ ನಾರುತ್ತಿಕರ್ಣ ॥೧॥

ಎಂಬ ಮಾತು ಹಣದ ಹೆಗ್ಗಳಿಕೆಯನ್ನೇ ಹೇಳುತ್ತದೆ ಹಣವು ಹೊಟ್ಟೆಯಲ್ಲಿ ಮೂಡಿದ ಕೂಸಿನ ಮೊದಲುಗೊಂಡು ಸತ್ತು ಶ್ರಾದ್ಧ ಪಡಗುವವರೆಗೂ ಬೇಕು ಹಣವಿದ್ದವರು ಮಾಡಿದ ಯಾವ ಕೆಲಸವಾದರೂ ಚೆನ್ನಾಗಿ ಕಾಣುತ್ತದೆ ಹಣವಿದ್ದರೆ ತೀರಿತು, ಬಂಧು ಬಳಗ ಮುಂತಾದವರು ನೊಣಗಳಂತೆ ಮುತ್ತಿ ಬಿಡುವರು, ನಗುವರು, ಕರೆಯುವರು, ಹೊಗಳುವರು; ಹಿಗ್ಗುವರು. ಹಣ ಹೋಗಿ ಬರಿಗೈ ಆದವರ ಒವಣಿ ಹೇಳಲಿಕ್ಕೆ ಬಾರದ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಸಹ ಸಿಟ್ಟಿನಿಂದ ಸಿಡಿದು ಬೀಳುವರು. ಅದಕ್ಕಾಗಿ ಸರ್ವಜ್ಞ ಕವಿಗಳು ಹೀಗೆಹೇಳಿದ್ದಾರೆ

ಧನಕನಕವುಳ್ಳನಕ ದಿನಕರನತೆರನಕ್ಕು।
ಧನಕನಕ ಹೋದ ಮರುದಿವಸ ಹಾಳೂರ।
ಶುನಕನಂತಕ್ಕು ಸರ್ವಜ್ಞ ॥೧॥

ಆದುದರಿಂದ ಹಣವು ಪ್ರತಿಯೊಬ್ಬರಿಗೆ ಅವಶ್ಯವಾಗಿಬೇಕು. ಹಣವೇ ಪ್ರಾಣ. ಹಣವೇ ತ್ರಾಣ ಎನ್ನುವದರಿಂದ ನಾವು ಹಣವನ್ನು ಗಳಿಸಲಿಕ್ಕೇ ಬೇಕು ಅದೂ ಪರಪೀಡೆ ಯಾಗದಂತೆ ಸತತ ದುಡಿಯಬೇಕು ಬಂದ ಹಣವನ್ನು ತಕ್ಕಷ್ಟು ಬಳಿಸಬೇಕು ಉನ್ನತಿಗಾಗಿ ಉಳಿಸಬೇಕು ಆ ಉಳಿಸಿದ ಗಳಿಕೆಯನ್ನು ಬ್ಯಾಂಕಿನಲ್ಲಿಡಬೇಕು

ಕೆಲ ಕೆಲವು ಜನರು ತಮ್ಮ ಗಳಿಕೆಯನ್ನು ಹೂಗಿದು ಬಿಡುವರು, ಇಲ್ಲವೆ ಹುಚ್ಚುತನದಿಂದ ಆಭರಣ ಮಾಡಿಸುವರು ಹೀಗೆ ಮಾಡಿದರೆ ತಮ್ಮ ಜೀವವನ್ನು ತಾವೇ ಕೊಂದು ಕೊಂಡಂತೆ ಆಗುವದು ಯಾಕಂದರೆ ಹಣವೇ ಜೀವ. ಆ ಜೀವವನ್ನು ಮಣ್ಣಲ್ಲಿ ಮುಚ್ಚುವದು ಆಭರಣಕ್ಕಾಗಿ ಸೆರೆ ಇಡುವದು, ಪಾಪದ ಕೆಲಸ ಹಣವು ಹರಿದಾಡುವ ಗುಣವುಳ್ಳದ್ದು ಬಹು ಜನರ ಹಿತವನ್ನು ಬಹು ರೀತಿಯಿಂದ ಸಾಧಿಸು ವಂತಾದ್ದು. ಇದನ್ನು ಕೊಂದು ಹಾಕುವದು ಎಂದಿಗೂ ನೆಟ್ಟಗಲ್ಲ. ಹಣ ಹೂಗಿದ ಮನುಷ್ಯನು ಹೇಳದೆ ಸತ್ತು ಹೋದರಂತೂ ಮನೆಯವರು ಹೆಗ್ಗಣದ ಅವತಾರವನ್ನು ತಾಳಬೇಕಾಗುತ್ತದೆ ಮನೆಯನ್ನು ಕಡಿದು ಕಡಿದು ಕೆಡವಿ ಬಿಡುತ್ತಾರೆ ಆದುದರಿಂದ ಯಾರೂ ಹಣವನ್ನು ಹೂಗಿಯಬಾರದು ಅದು ಹೆಣವಲ್ಲ ಆಭರಣ ಮಾಡಿಸಬಾರದು, ಅದು ತೊಡುಗನಲ್ಲ

ನಮ್ಮ ಹಣವನ್ನು ಬ್ಯಾಂಕಿನಲ್ಲಿಡುವದರಿಂದ ಅದನ್ನು ಹಗಲಿರುಳು ಕಾಯುವ ಕಾಟವು ತಪ್ಪುತ್ತದೆ ಮಂದಿಯ ಮುಂದೆ ತೋರಿಸುವ ದುಂದು ಗಾರಿಕೆ ಹೋಗುತ್ತದೆ ಸಾಲ ಕೊಡಿರಿ, ಕೈಗಡ ಕೊಡಿರಿ, ಬಾಯಿಗಡ ಕೊಡಿರಿ ಎಂಬ ಸೊಲ್ಲು ನಿಲ್ಲುತ್ತದೆ ಪೆಟ್ಟಿಗೆ ತರಬೇಕು, ಕಪಾಟು ತರಬೇಕು, ತಿಜೋರಿ ತರಬೇಕು, ಬೀಗ ಹಾಕಬೇಕು, ಬೀಗದ ಕೈ ಜತನ ಮಾಡಬೇಕು ಎಂಬ ಹಾಳು ಹವ್ಯಾಸವು ಹರಿದು ಹೋಗುತ್ತದೆ ಹೊಸ ಹೊಸ ಉದ್ಯೋಗ ಮಾಡಲಿಕ್ಕೆ ಹುರುಪು ಬರುತ್ತದೆ ಬಂದ ಹಣವನ್ನು ಬ್ಯಾಂಕಿಗೆ ಕಳಿಸುವದ ರಿಂದ ಅಲ್ಲಿ ನಮ್ಮ ಹಣವೂ ಹಗಲಿರುಳು ದುಡಿದು ಬಡ್ಡಿಯನ್ನು ಕೊಡುತ್ತದೆ ನಮ್ಮ ಕೂಡ ನಮ್ಮ ಹಣವೂ ದುಡಿಯುವದರಿಂದ ನಮ್ಮ ಸಂಪತ್ತು ಹೆಚ್ಚಾ ಗುತ್ತ ಹೋಗುವದು, ನಾವು ಸತ್ತರೂ ನಮ್ಮ ಹಣವು ಬ್ಯಾಂಕಿನಲ್ಲಿ ದುಡಿದೇ ದುಡಿಯುತ್ತದೆ ಬಡ್ಡಿ ಕೊಟ್ಟೇ ಕೊಡುತ್ತದೆ. ನಮ್ಮ ಮಕ್ಕಳು ಮರಿಗಳಿಗೆ

ಮುಟ್ಟಿಸೇ ಮುಟ್ಟಿಸುತ್ತದೆ ಲೆಕ್ಕಪತ್ರವನ್ನು ಸಹ ಬ್ಯಾಂಕಿನವರೇ ಚೆನ್ನಾಗಿ ಮಾಡುವದರಿಂದ ನಮಗೆ ಕಾರಕೂನರ ಅವಶ್ಯಕತೆಯೂ ಇಲ್ಲ ಯಾರಿಗೂ ಭಾರವಾಗದ ಬಡ್ಡಿಯು ಬರುವದರಿಂದ ಪಾಪದ ಭೀತಿಯೂ ಇಲ್ಲ

ನಮ್ಮ ಉದ್ಯೋಗದಿಂದ ಬಂದ ಹಣದಲ್ಲಿ ಕೆಲವು ಭಾಗ ಬಳಿಕೆಗಾಗಿ, ಕೆಲವು ಭಾಗ ಗಳಿಕೆಗಾಗಿ ಎಂದು ಗೊತ್ತುಪಡಿಸಿಕೊಳ್ಳಬೇಕು ಬಳಿಕೆಯ ಹಣವನ್ನು ಬ್ಯಾಂಕಿನಲ್ಲಿ ಚಾಲತಿ ಠೇವಿನಂತೆ ಇಡಬೇಕು ಇದರ ಬಡ್ಡಿ ನೂರಕ್ಕೆ ವರ್ಷಕ್ಕೆ ೧-೨ ರೂಪಾಯಿ ಇರುತ್ತದೆ ಈ ಹಣವು ನಮಗೆ ಬೇಕಾದಾಗ ಸಿಗುತ್ತದೆ ಗಳಿಕೆಯೆಂದು ತೆಗೆದ ಹಣವನ್ನು ಮುದ್ದತಿ ಠೇವಿನಂತೆ ಇಡಬೇಕು ಇದರ ಬಡ್ಡಿ ೩-೪ ರೂಪಾಯಿ. ಈ ಹಣವು ಮುದ್ದತು ಮುಟ್ಟಿದಾಗ ಮಾತ್ರ ಬರುವದು ಬಡ್ಡಿಯು ಪ್ರತಿವರ್ಷ ತಪ್ಪದೆ ಬರುತ್ತದೆ ಈ ಬಡ್ಡಿಯನ್ನೂ ಠೇವಾಗಿ ಇಡಲಿಕ್ಕೆ ಬರುತ್ತವೆ ಮುಂದಿನ ವರ್ಷ ಇದಕ್ಕೂ ಬಡ್ಡಿ ಬರುತ್ತದೆ. ಹೀಗಾಗಿ ನಮ್ಮ ಹಣವು ಹಲವು ಮಕ್ಕಳ ಗಟ್ಟಿಯಂತೆ ಬೆಳೆಯುತ್ತ ಹೋಗುವದು ಆದುದರಿಂದ ಬ್ಯಾಂಕಿನಲ್ಲಿ ಇಟ್ಟ ಹಣವು ಭೂಮಿಯಲ್ಲಿ ಹಾಕಿದ ಬೀಜವೂ ಒಂದೇ ಎಂದು ಹೇಳಬಹುದು

ನಿತ್ಯದ ಬಳಿಕೆಗಾಗಿ ಬೇಕಾಗುವಷ್ಟು ಹಣವನ್ನು ಚಾಲತಿ ಠೇವಿನಂತೆ ಇಡಬೇಕೆಂದು ಈ ಮೊದಲು ಹೇಳಿದೆ ಅದಕ್ಕಾಗಿ ಬ್ಯಾಂಕಿನವರು ನಮಗೆ "ಚಕ್‌ಬುಕ್" ಎಂಬ ಪುಸ್ತಕವನ್ನು ಕೊಡುವರು. ಅದರಲ್ಲಿ ನಮಗೆ ಹಣ ಬೇಕಾದಾಗ ಒಂದು ಪಾನಿನಲ್ಲಿ ಬರೆದು ಬ್ಯಾಂಕಿಗೆ ಕಳಿಸಿದರೆ ರೋಖು ಹಣ ಸಿಗುವದು ಈ ಪ್ರಕಾರ ನಮ್ಮ ಚಾಲತಿ ಠೇವು ತೀರುವವರೆಗೂ ಹಣ ಸಿಗುವದು. ಅದಷ್ಟು ಬಡ್ಡಿ ಬರುವದು. ದೊಡ್ಡ ದೊಡ್ಡ ಅಂಗಡಿಯವರಲ್ಲಿ ಸಾಮಾನು ತಕ್ಕೊಂಡು ಚೆಕ್ಕು ಬರೆದು ಕೊಟ್ಟರೂ ಅವರು ಹಣದಂತೆ ಅದನ್ನು ತೆಗೆದುಕೊಳ್ಳುವರು. ಇದರಿಂದ ಚೆಕ್‌ಬುಕ್ ಹತ್ತರ ಇಟ್ಟು ಕೊಂಡು ಬೇಕಾದಲ್ಲಿ ಬೇಕಾದ ವ್ಯವಹಾರ ಮಾಡಬಹುದು ಇದನ್ನು ಬೇರೆ ಜನರು ಉಪಯೋಗಿಸಿಲಿಕ್ಕೆ ಬರುವದಿಲ್ಲವಾದುದರಿಂದ ಕಳೆದು ಹೋದರೂ ಭಯವಿಲ್ಲ ಕೂಡಲೆ ಬ್ಯಾಂಕಿಗೆ ತಿಳಿಸಿ ಮತ್ತೊಂದು ಚೆಕ್‌ಬುಕ್ ತೆಗೆದು ಕೊಳ್ಳಬೇಕು ಇದರಿಂದ ನಮ್ಮ ವ್ಯವಹಾರಕ್ಕೆ ಒಳ್ಳೇ ಅನುಕೂಲವಾಗುತ್ತದೆ ಈಗ ಅನೇಕ ವ್ಯವಹಾರಗಳು ಚೆಕ್ಕಿನಿಂದಲೇ ಸಾಗುತ್ತವೆ. ಆದರೆ

ಓದು ಬರೆಹ ಮಾತ್ರ ಬರಬೇಕು. ಯಾರಿಗೆ ಓದು ಬರೆಹ ಬರುವದಿಲ್ಲವೋ ಅವರಿಗೆ ಏನೂ ತಿಳಿಯುವದಿಲ್ಲ ಚೆಕ್ಕಿನ ವ್ಯವಹಾರಕ್ಕೆ ಬಲ್ಲವರುಬೇಕು ಮುದ್ದತಿ ಠೇವಿಗೆ ಚೆಕ್ಕು ಇರುವದಿಲ್ಲ ಪಾಸಬುಕ್ಕು ಮಾತ್ರ ಇರುವದು ಅದರಲ್ಲಿ ಎಲ್ಲ ಲೆಕ್ಕ ಹಚ್ಚಿಕೊಟ್ಟಿರುತ್ತಾರೆ.

೫ ಬ್ಯಾಂಕಿನ ಉಪಯೋಗ.

ಬ್ಯಾಂಕಿನ ಉಪಯೋಗವು ಹಳ್ಳಿಹಳ್ಳಿಗಳಲ್ಲಿರುವ ಅನಾಥ ಆಸ್ತಿವಂತ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಇರುತ್ತವೆ ಇವರ ಹಣದ ಮೇಲೆ ಬಹು ಜನರ ಕಣ್ಣು ಇರುತ್ತದೆ ಕೊಟ್ಟರೆ ತಿರುಗಿ ಬರುವದಿಲ್ಲ ಬಿಟ್ಟರೆ ಕಳವು ಕೊಲೆ ಮಾಡಿ ಒಯ್ಯುತ್ತಾರೆ ಇಂಥವರು ತಮ್ಮ ರಕ್ಷಣೆಗಾಗಿ ತಮ್ಮ ಹಣವನ್ನು ಬ್ಯಾಂಕಿನಲ್ಲಿಡಬೇಕು ಆಗ ಯಾವ ಭಯವೂ ಬರುವದಿಲ್ಲ ಬೇಕಾದಾಗ ಬಳಿಕೆಯು ಪೂರ್ತಿ ತರಲಿಕ್ಕೆ ಬರುತ್ತದೆ ಬ್ಯಾಂಕಿನಲ್ಲಿ ಆಗಬಾ, ಈಗಬಾ, ಹೋಗಿಬಾ ಎಂಬ ಮಾತು ಎಂದಿಗೂ ಇರುವದಿಲ್ಲ. ಚಾಲತಿ ಠೇವು ನಮ್ಮ ಕೈಚೀಲದಲ್ಲಿದ್ದ ಹಣದಂತೆ ಬಹಳ ಸಹಾಯವಾಗುತ್ತದೆ ಬಡ್ಡಿಯಂತೂ ಬಂದೇ ಬರುತ್ತದೆ ಮುದ್ದತಿ ಠೇವನ್ನು ಕಾಯಂ ಆಸ್ತಿಯನ್ನು ಮಾಡುವಾಗ ತೆಗೆದುಕೊಳ್ಳಲಿಕ್ಕೆ ಬರುತ್ತವೆ ಆಸ್ತಿ ಮಾಡುವ ಆಶೆ ಇಲ್ಲದಿದ್ದರೆ ಬ್ಯಾಂಕಿನ ಶೇಅರ, ಅಥವಾ ಮುದ್ದತಿ ಠೇವು ಇವೇ ಕಾಯಂ ಆಸ್ತಿಯಾಗುವವು ಈ ವಿಷಯದಲ್ಲಿ ಬ್ಯಾಂಕಿನ ಶೇಅರ ಕೊಳ್ಳುವದು ಒಳ್ಳೇ ವಿಹಿತ ಯಾಕಂದರೆ ವರ್ಷದ ಆಖೈರಿಗೆ ಬ್ಯಾಂಕಿಗೆ ಆದ ಲಾಭದಲ್ಲಿ ಕೆಲಅಂಶವನ್ನು ಶೇಅರುದಾರರಿಗೆ ಹಂಚಿಕೊಡುತ್ತಾರೆ ಅದು ಕನಿಷ್ಟ ೧೦೦ಕ್ಕೆ ೯–೧೦ ರಂತೆ ಒದಗುತ್ತದೆ. ಹೀಗೆ ಜೀವಮಾನ, ವಂಶಪಾರ ಲಾಭ (ಡಿವ್ಹಿಡೆಂಡ) ಸಿಗುತ್ತ ಹೋಗುವದು. ಇದು ಕಾಯಂ ಆಸ್ತಿಯಾಗಿ ಬಿತ್ತಿದ ಬೆಳೆ ಬರುತ್ತವೆ ನಮಗೆ ಬೇಕಾದಾಗ ಮನೆಮಾರು ಮಾರುವಂತೆ ಈ ಶೇಅರುಗಳನ್ನು ಮಾರಲಿಕ್ಕೂ ಬರುತ್ತದೆ ಆದುದರಿಂದ ನಮ್ಮ ಹಣವು ನಮಗೆ ಉಳಿದು ಬೆಳೆದು ಬರಬೇಕಾದರೆ ಬ್ಯಾಂಕಿನಲ್ಲಿ ಠೇವಿಡಬೇಕು ಇಲ್ಲವೆ ಬ್ಯಾಂಕಿನ ಶೇಅರು ಕೊಳ್ಳಬೇಕು.

ಬ್ಯಾಂಕಿಗೆ ಬಂದ ಹಣವು ಸುಮ್ಮನೆ ಬಿದ್ದುಕೊಂಡಿರುವದಿಲ್ಲ ಅದನ್ನು ಯೋಗ್ಯ ಜನರಿಗೆ ಯೋಗ್ಯ ಕೆಲಸಗಳಿಗೆ ಸಾಲ ಕೊಡುತ್ತಾರೆ. ಸರಕಾರವು

ದೇಶದ ಒಕ್ಕಲುತನ, ಕೈಗಾರಿಕೆ, ನೀರಾವರಿ, ಶಿಕ್ಷಣ ಮುಂತಾದ ಕೆಲಸಗಳಿಗೆ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತದೆ. ಈ ಹಣದಿಂದ ಜನಹಿತದ ಕಾರ್ಯ ಮಾಡುತ್ತವೆ ಅವೆಂದರೆ ಅದರ ಪುಣ್ಯಾಂಶವು ನಮ್ಮ ಪಾಲಿಗೆ ಬರುತ್ತದೆ ಹೀಗೆ ಇಹ ಪರಗಳಲ್ಲಿ ಸೌಖ್ಯ ಕೊಡುವ ಹಣವು ಮುಪ್ಪಿನ ಸಮಯದಲ್ಲಿ ರಕ್ಷಣೆ ಮಾಡುವ ಹಣವು ಬ್ಯಾಂಕಿನಲ್ಲಿ ಇರುವದು ಅತಿ ಅವಶ್ಯವು ಬಾಯಿಯಲ್ಲಿ ತುತ್ತು ಹಾಕುವದರಿಂದ ದೇಹ ರಕ್ಷಣೆಯಾಗುವಂತೆ ಬ್ಯಾಂಕಿನಲ್ಲಿ ಹಾಕಿದ ಹಣದಿಂದ ದೇಹದ ಮತ್ತು ದೇಶದ ರಕ್ಷಣೆಯಾಗುತ್ತದ ಇದನ್ನರಿತು ಎಲ್ಲರೂ ತಮ್ಮ ತಮ್ಮ ಗಳಿಕೆಯನ್ನು ಬ್ಯಾಂಕಿನಲ್ಲಿಡುತ್ತ ಹೋಗಬೇಕು.

ಕೆಲ ಕೆಲವು ಜನರು ಆಭರಣದಾಶೆಗಾಗಿ ಹಣವನ್ನು ಹಾಳು ಮಾಡುವರು ಇದು ಈಗಿನ ಕಾಲದ ಮಾತಲ್ಲ ಹಿಂದೆ ಈಗಿನಂತೆ ಬ್ಯಾಂಕುಗಳು ಇದ್ದಿಲ್ಲ ಮತ್ತು ಸರಕಾರದ ರಕ್ಷಣೆಯೂ ಸರಿಯಾಗಿದ್ದಿಲ್ಲ ಜನರು ಸಹ ಒಂದೇ ಕಡೆಗೆ ನೆರೆಯಾಗಿ ನಿಲ್ಲುವ ನಿಶ್ಚಿತವಿದ್ದಿಲ್ಲ. ಅದಕ್ಕಾಗಿ ಆ ಜನರು ಬೆಳ್ಳಿ, ಬಂಗಾರ, ಮುತ್ತು ರತ್ನಗಳ ಆಭರಣವನ್ನು ಮಾಡಿಸಿ, ಹೆಣ್ಣು ಮಕ್ಕಳ ಮೇಲೆ ಹೇರಿ, ಸದಾ ಕಾಯುಲಿಕ್ಕೆ ಹಚ್ಚುತ್ತಿದ್ದರು ಬೇರೆ ಕಡೆ ಗುಳೆ ಕಿತ್ತುವಾಗ ಆ ಹೆಣ್ಣು ಮಕ್ಕಳೇ ಹುಚ್ಚಿನಿಂದ ಹೊರಡುತ್ತಿದ್ದರು ಈ ಗುಟ್ಟು ಅವರಿಗೆ ಗೊತ್ತಿದ್ದಿಲ್ಲ ತಿಳಿಯದೆ ಕಾಲಿಗೆ, ಕೈಗೆ, ಕೊರಳಿಗೆ, ನಡಕ್ಕೆ, ಎದೆಗೆ ಕಿವಿಗೆ, ಮೂಗಿಗೆ, ತಲೆಗೆ ಬೆಳ್ಳಿ ಬಂಗಾರಗಳ ತುಂಡು (ಆಭರಣ) ಗಳನ್ನು ಸಿಕ್ಕಿಸಿಕೊಂಡು ಸಾಗುತ್ತಿದ್ದರು. ನಡುದಾರಿಯಲ್ಲಿ ಬೀಗರು (ಕಳ್ಳರು) ಭೆಟ್ಟಿಯಾದರ ತೀರಿತು ಈ ಹೆಣ್ಣು ಮಕ್ಕಳೇ ಹೊಡೆತ ತಿನ್ನಬೇಕಾಗುತ್ತಿತ್ತು ಅಂಗಹೀನರಾಗಬೇಕಾಗುತ್ತಿತ್ತು ಒಮ್ಮೊಮ್ಮೆ ಮರಣಕ್ಕೂ ಸಹ ಈಡಾಗಬೇಕಾಗುತ್ತಿತ್ತು. ಈಗ ಅಷ್ಟು ಹುಚ್ಚು ಹೆಣ್ಣುಮಕ್ಕಳು ಇಲ್ಲ. ಇದು ಅವರ ಪುಣ್ಯ ! ಇರಲಿ.

ಆಭರಣ ಮಾಡಿಸುವದರಿಂದ ಹಣಕ್ಕೆ ಕ್ಷಯರೋಗ ಹತ್ತಿದಂತೆ ಆಗುತ್ತದೆ ಮೊದಲು ಚಿನಿವಾರರು ಚಿನ್ನವನ್ನು ಕಂಡರೆ ತಿಕ್ಕದೆ ಬಿಡುವದಿಲ್ಲ ಆ ಮೇಲೆ ಅಕ್ಕಸಾಲಿಗರು ಅದನ್ನು ಅನೇಕ ರೀತಿ ಸಣ ಮಾಡುತ್ತಾರೆ ಕ್ಷೀ

ಸಾಧಿಸಿ ಹೀನಧಾತು ಬೆರಸುತ್ತಾರೆ ಮುಂದೆ ಹೆಣ್ಣುಮಕ್ಕಳು ಅದನ್ನು ಅಲ್ಲಲ್ಲಿ ಹೊತ್ತುಕೊಂಡು ತಿರುಗಾಡಿ ತಿಕ್ಕಿ, ಸವೆಸುತ್ತಾರೆ ಪ್ರತಿದಿನ ಚೊಕ್ಕ ಬಂಗಾರದ ಆಭರಣವನ್ನು ಧರಿಸುವದರಿಂದ ೧ ತೊಲೆಗೆ ೧ ವರ್ಷಕ್ಕೆ ಮೂರು ಗುಂಜಿ ಸವೆದು ಹೋಗುತ್ತದೆ ಹೀಗೆ ಹತ್ತಿಪ್ಪತ್ತು ವರ್ಷ ಗತಿಸಿದರೆ ಆ ಆಭರಣ ಸತ್ತು ಹೋಗುವದರಲ್ಲಿ ಸಂದೇಹವಿಲ್ಲ ಅದುದರಿಂದ ಜಾಣರಾದ ವರು ತಮ್ಮ ಹಣವನ್ನು ಆಭರಣವೆಂಬ ಆಳವಾದ ತಗ್ಗಿನಲ್ಲಿ ಚೆಲ್ಲಬಾರದು "ಬಂದದ್ದು ಬ್ಯಾಂಕಿಗೆ ಜಮಾ" ಎಂಬ ಹಿತ ನುಡಿಯನ್ನು ಸತ್ರತ ನುಡಿಯಬೇಕು

ಹಣವು ಹತ್ತರ ಇದ್ದರೆ ಒಂದು ತರದ ಹುಚ್ಚು ಬರುತ್ತದ ಅದಕ್ಕೆ ಧನಮದ–ಅನ್ನುವರು ಈ ಹುಚ್ಚು ಬಂದಾಗ ಆಗಬಾರದ ಕೆಲಸಗಳು ಆಗು ತ್ತವೆ ಆಡಬಾರದ ಮಾತುಗಳು ಬರುತ್ತವೆ ನೋಡಬಾರದ ನೋಟಗಳು ಕಾಣುತ್ತವೆ ಹೀಗೆ ಅನೇಕ ಕಾರ್ಯಗಳು ಆಗುತ್ತವೆ ಇದು ಆ ಹಣದ ಗುಣ ಅದು ನಮಗ ಬರುತ್ತದೆ ಆದುದರಿಂದ ಹಣವನ್ನು ಹತ್ತರ ಇಟ್ಟು ಕೊಳ್ಳದೆ ಅದನ್ನು ಸಂತತ ದುಡಿಸಬೇಕು ದುಷ್ಟು ದೆವ್ವನಂತೆ ಇರುತ್ತದ ಅದನ್ನು ದೂರವಿಟ್ಟು ದುಡಿಸಬೇಕು ಆದುದರಿಂದ ನಮ್ಮ ಹಣವನ್ನು ಒಕ್ಕಲುತನ, ವ್ಯಾಪಾರ, ಕೈಗಾರಿಕೆ ಮುಂತಾದವುಗಳಲ್ಲಿ ಹಾಕಿ ದುಡಿಸ ಬೇಕು ಅದು ಸಾಧಿಸದಿದ್ದರೆ ಇವೇ ಕೆಲಸಕ್ಕಾಗಿ ಸಾಲ ಕೊಡುವ ಬ್ಯಾಂಕಿ ನಲ್ಲಿ ದಬ್ಬಬೇಕು ಅದು ಅಸಿಮಿಸಿ ಮಾಡದೆ ಹಣವನ್ನು ದುಡಿಸುವದು ಮಾತು ಕೇಳದ ಮಗನನ್ನು ಮಂದಿಯ ಕೈಯಲ್ಲಿ ಕೊಟ್ಟು ದುಡಿಸಿದಂತ ಆಗುತ್ತದೆ

೬ ಸಣ್ಣ ಕತೆಗಳು.

ಮದ ಬಂದ ಮಗ.

ಒಂದು ಊರಲ್ಲಿ ಕಲ್ಲಪ್ಪನೆಂಬ ರೈತನಿದ್ದ ಆತನಿಗೆ ಹತ್ತು ಕೂರಿಗ ಹೊಲವಿತ್ತು ಆತನು ಎರಡೆತ್ತು ಮಾಡಿಕೊಂಡು ಸುಖದಿಂದ ಇದ್ದ ತುಸು ಹಣ ಹತ್ತರ ಇತ್ತು, ಮುಂದೆ ಮಗ ಮಲ್ಲಪ್ಪ ಹರೆಯಕ್ಕೆ ಬಂದ. ಹಣದ ಮದ ಬಂತು ತಂದೆಯ ಮಾತು ಕೇಳಲಿಲ ತಿಂದು ತಿರುಗುವ ಚಟ ಕಲಿತ

ಮನೆಯ ಸಾಮಾನು ದಿನೇ ದಿನೇ ಹಾಳಾಗಹತ್ತಿತು ಬಂಧು ಒಳಗಡವರು ಬುದ್ಧಿ ಹೇಳಿದರು ಬಗೆ ಹರಿಯಲಿಲ್ಲ ಈ ಜಗಳ ಆ ಊರ ಜಹಾಗೀರದಾರರ ಬಳಿಗೆ ಹೋಯಿತು ಅವರು ಮಲ್ಲಪ್ಪನ ಮಪವಿಳಿಸಿ ತಮ್ಮಲ್ಲಿ ದುಡಿಯಲಿಕ್ಕೆ ಇಟ್ಟುಕೊಂಡರು ಅವನ ಸಂಬಳವನ್ನು ಪ್ರತಿವರ್ಷ ಬ್ಯಾಂಕಿಗೆ ಜಮಾ ಮಾಡಿದರು ಅದರಿಂದ ಬಡ್ಡಿಯು ಬರಹತ್ತಿತು ಅದನ್ನು ನೋಡಿ ಕಲ್ಲಪ್ಪನು ತನ್ನ ಎಲ್ಲ ಹಣವನ್ನು ಬ್ಯಾಂಕಿನಲ್ಲಿಟ್ಟನು ತಾನೂ ಮನೆಯಲ್ಲಿ ಚಿಂತಿಬಿಟ್ಟು ದುಡಿಯ ಹತ್ತಿದನು. ಮಗ ಮಂದಿಯು ಮನೆಯಲ್ಲಿ ದುಡಿಯ ಹತ್ತಿದ ಇವರು ಗಳಿಸಿದ ಹಣವು ಬ್ಯಾಂಕಿನಲ್ಲಿ ದುಡಿಯ ಹತ್ತಿತು ಹೀಗಾಗಿ ತುಸು ದಿವಸಗಳಲ್ಲಿ ಅವರು ಭಾರಿ ಸಿರಿವಂತರಾಗಿದ್ದಾರೆ ಈಗ ಅವರು ಕೂತು ಉಂಡರೂ ಸಾಲುವಷ್ಟು ಬಡ್ಡಿ ಬ್ಯಾಂಕಿನಿಂದ ಬರುತ್ತದೆ

ಆಭರಣ ದಾಶೆಯ ಅಂಬವ್ವ.

ಒಂದು ಊರಲ್ಲಿ ಅಂಬವ್ವನೆಂಬ ಹೆಣ್ಣುಮಗಳಿದ್ದಳು. ಆಕೆಗೆ ಆಭರಣಗಳ ಮೇಲೆ ಬಲು ಪ್ರೀತಿ ಅದಕ್ಕಾಗಿ ಹಗಲೆಲ್ಲ ಗಂಡನ ಕೂಡ ಜಗಳವಾಡುತ್ತಿದ್ದಳು. ಗಂಡ ಗಂಗಪ್ಪನು ಬಲು ಜಾಣ ಬಂದ ಹಣವನ್ನು ಬ್ಯಾಂಕಿಗೆ ಜಮಾ ಮಾಡುತ್ತಿದ್ದ ತಂದ ಬಡ್ಡಿಯಲ್ಲಿ ಉಪಜೀವನ ಮಾಡುತ್ತಿದ್ದ ಮುಂದೆ ಗಂಗಪ್ಪನು ಮುಪ್ಪಿನಿಂದ ಮರಣ ಹೊಂದಿದ ಆಗ ಅಂಬಕ್ಕನಿಗೆ ಅನುಕೂಲವಾಯಿತು ಬ್ಯಾಂಕಿಗೆ ಹೋಗಿ ಎಲ್ಲ ಹಣ ತಂದಳು, ಮೈತುಂಬ ಆಭರಣ ಮಾಡಿಸಿಕೊಂಡಳು ತೋರಿಸುವ ಸಲುವಾಗಿ ತವರು ಮನೆಗೆ ಹೊರಟಳು ಮಾರ್ಗದಲ್ಲಿ ಮೂವರು ಕಳ್ಳರು ಕೂಡಿ ಮೈಹುಳೀ ಬಡಿದು, ಎಲ್ಲ ಆಭರಣ ಕಸಿದುಕೊಂಡು ಹೋದರು ಅಂಬವ್ವನು ನರಳುತ್ತ ಹೊರಳಿ ಒಂದು ಹೊಟ್ಟೆಯ ಸಲುವಾಗಿ ಬಿಕ್ಕಿಬೇಡ ಹತ್ತಿದ್ದಾಳೆ ಯಾವಾಗಲು ಬ್ಯಾಂಕಿನಲ್ಲಿಟ್ಟ ಹಣವನ್ನು ನೆನೆಸಿಕೊಂಡು ಅಳುತ್ತಿದ್ದಾಳೆ ಕಳಕೊಂಡ ಮೇಲೆ ತಿಳಕೊಂಡು ಫಲವೇನು ?

೭ ಉಪದೇಶ.

೧ ದುಡಿಯದೆ ದುಡ್ಡು ಸಿಗುವದಿಲ್ಲ ಕಡಿಯದೆ ತಿನ್ನಲಿಕ್ಕೆ ಬರುವದಿಲ್ಲ

೨ ಹಣವು ಹತ್ತರ ಇದ್ದರೆ ಗುಣವನ್ನು ಕೆಡಿಸುತ್ತದೆ. ಹೆಣವನ್ನ ಹಾಳುತ್ತದೆ.

೩ ಅನ್ಯಾಯದಿಂದ ಗಳಿಸಿದ್ದು ಅಡವೀಪಾಲು ಪಾಪದ ಕಾಲು
೪ ಹಣವು ಹಗಲಿರುಳು ದುಡಿಯುತ್ತದೆ ಹಣ್ಣನ್ನು ಕೊಡುತ್ತದೆ.
೫ ಪರರ ದುಡ್ಡು ನರಮಾಂಸಕ್ಕೆ ಸಮಾನವೆಂದರಿಯಬೇಕು
೬. ಹಣವು ಹೆಚ್ಚಿದಂತೆ ಗುಣವು ಹೆಚ್ಚುತ್ತ ಹೋಗಬೇಕು.
೭. ಬ್ಯಾಂಕಿನಲ್ಲಿಟ್ಟ ಹಣವು ಭಾಗ್ಯದ ಬೀಜವಾಗುವದು.
೮. ದುಡ್ಡು ದೆವ್ವನ ಸಮಾನ, ಒಡ್ಡಿ ಗುಡ್ಡದ ಸಮಾನ.
೯. ಸಾಲಗಾರನಾಗಿ ಸಾಯುವೆದ್ದ, ಶೀಲವಿಟ್ಟು ನಡೆಯುವೇತ
೧೦. ಎತ್ತ ಹೋದರೂ ಹತ್ತು ದುಡ್ಡು ಹತ್ತರ ಇರಲಿ
೧೧. ಬರಿಗೈ ಬಂಟನು ಕರಿಗಾಲ ಕತ್ತೆಯಂತೆ ಹಾರುವನು
೧೨ ಹಣವು ಹೆಣಕ್ಕೆ ಜೀವತರುತ್ತದ ಗುಣಕ್ಕೆ ಬೆಲೆ ಕೊಡುತ್ತದೆ.
೧೩ ಆಭರಣ ಮಾಡಿಸಿದರೆ ಆ ಜನ್ಮ ಋಣವನ್ನು ಸೆರೆಯಿಟ್ಟಂತೆ
೧೪ ದುಡ್ಡು ಬೇಕು, ದುಡಿಯಬೇಕು, ಸೌಖ್ಯ ಪಡೆಯಬೇಕು

೮ ಉಪಸಂಹಾರ.

ಬಂಧುಗಳೇ, ಇಲ್ಲಿಯವರೆಗೆ ಹಣದ ಮಹತ್ವ, ಹಣ ಬರುವ ಹಾದಿ, ಬಳಕೆಯ ಬಗೆ, ಹಣ ಹೆಚ್ಚಿಸುವರೀತಿ, ಬ್ಯಾಂಕಿನ ಮಾಹಿತಿ ಅವರ ಉಪಯೋಗ ಮುಂತಾದ ವಿಷಯಗಳನ್ನು ಸರಳವಾಗಿ ತಿಳಿಯುವಂತೆ ಹೇಳಿದ್ದಾಗಿದೆ. ಈ ಪ್ರಕಾರ ನಡೆದುಕೊಂಡರೆ ಎಲ್ಲರಿಗೂ ಸುಖವಾಗುತ್ತದೆ ಬಡತನದಿಂದ ಬಳಲುವ ಭಾರತವು ಭಾಗ್ಯಶಾಲಿಯಾಗುತ್ತದೆ ಮುಖ್ಯವಾಗಿ ಬೆವರು ಸುರಿಸಿ ಭಾಗ್ಯವಂತರಾಗಬೇಕು ಬಂದ ಹಣದಲ್ಲಿ ಅನ್ನ, ಅರಿವೆ, ವಸತಿ, ಪಾತ್ರೆ ಔಷಧಗಳಿಗಾಗಿ ಮಾತ್ರ ಖರ್ಚುಮಾಡಿ ಉಳಿದದ್ದನ್ನು ಬ್ಯಾಂಕಿಗೆ ಕಳಿಸಬೇಕು ಅಲ್ಲಿ ಚಾಲತಿ ಠೇವಿನಂತೆ ಇಟ್ಟ ಹಣವು ನಮ್ಮ ಯಾವ ಉದ್ಯೋಗಕ್ಕೂ ಅಡ್ಡಿ ಮಾಡುವದಿಲ್ಲ. ಪರದೇಶದವರು ಈ ರೀತಿ ನಡೆದು ಸಿರಿವಂತರಾಗಿದ್ದಾರೆ. ನಾವೂ ಹಾಗೆ ನಡೆದು ಸಿರಿವಂತರಾಗಿ ಸೌಖ್ಯ ಹೊಂದೋಣ

ಜಯ ಭಾರತ! ಜಯ ಕರ್ನಾಟಕ !!